**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಅಸಲು ದಾವಾ ಸಂಖ್ಯೆ : 83/2023**

**ಪಿ. ಡಬ್ಲೂ : 1**

---------------------------------------------------------------------------------

**ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕ: 03.12.2025**

****

**ಮುಂದುವರೆದ ವಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ . ಎ ಬಿ ಬಿ ವಕೀಲರಿಂದಃ**

1. ನಾನು 2012 ರಿಂದ ಚಾಲನಾ ಲೈಸನ್ಸ ಹೊಂದಿರುತ್ತೇನೆ. ನನಗೆ ಆಂಗ್ಲ ಭಾಷೆ ಬರುವುದಿಲ್ಲ. 1ನೇ ವಾದಿ ನನ್ನ ಗೆಳೆಯ. ದಾವಾ ಸ್ವತ್ತನ್ನು ಇಲಾಹಿ ಮುಲ್ಲಾ ಹಾಗೂ ಅವರ ತಾಯಿಯಿಂದ ಖರೀದಿಸಲಾಗಿರುತ್ತದೆ. ಇಲಾಹಿ ಮುಲ್ಲಾ ಹಾಗೂ ಅವರ ತಾಯಿಯ ಮೇಲೆ ಅಸಲ ದಾವಾ ಸಂಖ್ಯೆ 15/2014 ಎಂದು 3ನೇ ಅಧಿಕ ದಿವಾಣಿ ನ್ಯಾಯಾದೀಶರ ನ್ಯಾಯಾಲಯ ಅಥಣಿಯಲ್ಲಿ ಇದೇ ದಾವಾ ಸ್ವತ್ತಿನ ಮೇಲೆ ಚಾಲ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು 5ನೇ ಪ್ರತಿವಾದಿ ಹಾಗೂ ಇನ್ನೊಬ್ಬ ವಾದಿಯು 6ನೇ ಪ್ರತಿವಾದಿಯಾಗಿ ಇರುತ್ತೇವೆ ಹಾಗೂ ನಮ್ಮ ವಕೀಲರ ಮೂಲಕ ಹಾಜರಾಗಿರುತ್ತೆವೆ ಎಂದರೆ ಸರಿ. ಸದರಿ ದಾವೆಯನ್ನು ಮಾಶಾಮ ಹಾಗೂ ಮೀರಾಸಾಬ ಇವರು ಇಲಾಹಿ ಮುಲ್ಲಾ ಹಾಗೂ ಅವರ ತಾಯಿಗೆ ದಾವಾ ಸ್ವತ್ತು ಸಂಬಂಧ ಇರುವುದಿಲ್ಲ ಎಂದು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯಲ್ಲಿ ನನ್ನ ಕೈಪಿಯತ್ತ ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಹಾಗೂ ಅಯೂಬ ಇಬ್ಬರು ಸೇರಿಕೊಂಡು ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ . ನನಗೆ ಇಲಾಹಿ ಮುಲ್ಲಾ ಹಾಗೂ ಮಹಬೂಬಿ ಮುಲ್ಲಾ ಇಬ್ಬರು ಸಂಬಂಧಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರಸ್ತುತ 3ನೇ ಪ್ರತಿವಾದಿ ಇಲಾಹಿ ಮುಲ್ಲಾ ಹಾಗೂ ಮಹಬೂಬಿ ಮುಲ್ಲಾ ಹಾಗೂ ನಮ್ಮ ವಿರುದ್ದ ಮಾನ್ಯ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಅಥಣಿ ರವರಲ್ಲಿ ಅಸಲ ದಾವ ಸಂಖ್ಯೆ 230/2022 ಎಂದು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಹಾಗೂ 1ನೇ ವಾದಿಯು

ಪಕ್ಷಗಾರರಾಗಿರುತ್ತೆವೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ತಕಾರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

2. ದಾವಾ ಸ್ವತ್ತಿನ ಚೆಕಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಹಾಗೂ 1ನೇ ವಾದಿ ಇಬ್ಬರೂ ಕೂಡಿಕೊಂಡು ಖೊಟ್ಟಿ ರೀತಿಯಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ಅಸಲ ದಾವಾ ಸಂಖ್ಯೆ 15/2014 ಚಾಲ್ತಿಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ವೆ ನಂ. 143/6 ರ 6 ಎಕರೆ ಜಮೀನನ್ನು ಖರೀದಿಸಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ದಾವಾ ಸ್ವತ್ತಿನ ವಿಷಯವಾಗಿ ನಾನು ಹಾಗೂ 1ನೇ ವಾದಿ ತಕರಾರು ಮಾಡಿದ್ದರಿಂದ ನಮ್ಮ ಮೇಲೆ ಗುನ್ನ ಸಂಖ್ಯೆ 122/2025 ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ನನ್ನ ವಿರುದ್ದ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಸಹ ದೂರನ್ನು ದಾಖಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ತಂಟೆ ತಕರಾರು ಮಾಡಿದ್ದರಿಂದ ನನ್ನ ವಿರುದ್ದ ದೂರು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. 1 ಮತ್ತು 2 ಪ್ರತಿವಾದಿಯರ ದಾವಾ ಸ್ವತ್ತಿನ ಕಬ್ಜಾ ವಹಿವಾಟನಲ್ಲಿ ಇರುತ್ತಾರೆ ಹಾಗೂ ನಾನು ದಬ್ಬಾಳಿಕೆ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ದಾವಾ ಸ್ವತ್ತನ್ನು ಯಾವತ್ತು ಸಹ ಖರೀದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ರಾಜಕೀಯ ಪ್ರಭಾವ ಬೀರಿ ಖೊಟ್ಟಿ ರೀತಿಯಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಇಲಾಹಿ ಮುಲ್ಲಾ ಹಾಗೂ ಮಹಬೂಬಿ ಮುಲ್ಲಾ ರವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೇಲೆ ಇನ್ನೊಂದು ದಾವಾ ಸಂಖ್ಯೆ 59/2014 ಸಂಗಲಬಿ ಎಂಬುವವರು ಹಾಸೀನ ಬಿ ರವರ ಮೇಲೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ 1ನೇ ವಾದಿ ಇಬ್ಬರು ಸೇರಿಕೊಂಡು ಇಲಾಹಿ ಹಾಗೂ ಮಹಬೂಬಿಗೆ ಸಹಾಯ ಮಾಡುವ ಉದ್ದೇಶದಿಂದ ಖೊಟ್ಟಿ ರೀತಿಯಿಂದ ಖರೀದಿ ಮಾಡಿರುತ್ತೇನೆ ಹಾಗೂ ದಾವಾ ಸ್ವತ್ತನ್ನು ಬಿಡಿಸಿಕೋಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿಃ 23.03.2025 ರಂದು ನಾನು ದಾವಾ ಸ್ವತ್ತಿನಲ್ಲಿ ದಾಂದಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ಮತ್ತು 2 ನೇ ಪ್ರತಿವಾದಿಯರನ್ನು ನಾನು ಹೊಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಅನಂತಪೂರದಲ್ಲಿ ಇರುವ ಪಾಟೀಲ ಎನ್ನುವವರ ಜೊತೆಗೂಡಿಕೊಂಡು 1 ಮತ್ತು 2 ನೇ ಪ್ರತಿವಾದಿಯರಿಗೆ ತಂಟೆ ತಕರಾರು

ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ದಾವಾ ಸ್ವತ್ತಿನಲ್ಲಿ ಇದ್ದ ಮೋಟಾರ ಬಾಕ್ಸನ್ನು ಹಾಗು ವಾಯರಗಳನ್ನು ಕಿತ್ತು ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಇದ್ದ ಉಳ್ಳಾಗಡ್ಡಿ ಹಾಗೂ ಜೋಳದ ಬೆಳೆಯನ್ನು ನಾನು ನಾಶಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಯರ ಸುಮಾರು 2 ಲಕ್ಷ ರೂಪಾಯಿಗಳ ವಸ್ತುಗಳನ್ನು ನಾಶ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ವಾದಿಯು ಮಿಲ್ಟ್ರಿಯಲ್ಲಿ ಕೆಲಸ ಮಾಡಿದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು 1 ಮತ್ತು 2 ನೇ ಪ್ರತಿವಾದಿಯರ ವಿರುದ್ದ ದಾಂದಲೆ ಮಾಡಿರುತ್ತೆವೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಕಬ್ಜಾ ವಹಿವಾಟನಲ್ಲಿ ಇರುವುದಿಲ್ಲ ಹಾಗೂ ದುರುದ್ದೇಶದಿಂದ ಖೊಟ್ಟಿ ಖರೀದಿ ಪತ್ರವನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ 1 ನೇ ಪ್ರತಿವಾದಿ ದಾವಾ ಸ್ವತಿನ ಕಬ್ಜಾ ವಹಿವಾಟನಲ್ಲಿ ಇಲ್ಲ ಈ ದಾವೆಯನ್ನು ಸಲ್ಲಿಸಿ 1 ಮತ್ತು 2 ನೇ ಪ್ರತಿವಾದಿಯರಿಗೆ ಅಂಜಿಸುತ್ತಾ ಬಂದಿರುತ್ತೆವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಕಬ್ಜಾ ವಹಿವಾಟನಲ್ಲಿ ಇರುತ್ತಾರೆ ಹಾಗೂ ನಾವು ಯಾವತ್ತು ಸಹ ದಾವಾ ಸ್ವತ್ತಿನ ಕಬ್ಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 2ನೇ ಪರತಿವಾದಿಯ ತಾಯಿಯ ಜಮೀನು ಆಗಿರುವುದರಿಂದ ಅವರೇ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

3ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.